# <u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.</u>

**ಓ.ಎಸ್.ಸಂಖ್ಯೆ.180/2022** ಡಿ.ಡಬ್ಲೂ.1

**ದಿನಾಂಕಃ 17.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿ ಪರ ಬಿ.ಎಲ್.ಕೆ ವಕೀಲರಿಂದಃ</u>**

1. ನನ್ನ ತಾತನ ಹೆಸರು ತಿಮ್ಮಪ್ಪ. ನನ್ನ ತಾತನಿಗೆ ನನ್ನ ತಂದೆ ಮುನಿಯಪ್ಪ, ಪತ್ಯಪ್ಪ, ನಾರಾಯಣಸ್ವಾಮಿ ಮತ್ತು ಕೆಂಪಣ್ಣ ಎನ್ನುವ ಮಕ್ಕಳು ಎಂದರೆ ಹೌದು. ಪತ್ಯಪ್ಪ 1970 ರ ಹಿಂದೆಯೇ ಕುಟುಂಬದಿಂದ ಹೊರ ಹೋಗಿದ್ದರು ಎಂದರೆ ಸರಿ. ಈ ದಾವೆಯು ನನ್ನ ಚಿಕ್ಕಪ್ಪ ನಾರಾಯಣಸ್ವಾಮಿ ರವರ ಮಗ ಹಾಕಿದ್ದಾನೆ ಎಂದರೆ ನಿಜ. ಪತ್ಯಪ್ಪ ಕುಟುಂಬದಿಂದ ಹೊರ ಹೋದ ನಂತರ ನನ್ನ ತಾತ ಮತ್ತು ಅವರ 3 ಜನ ಮಕ್ಕಳು ಒಟ್ಟು ಕುಟುಂಬದಲ್ಲಿಯೇ ಇದ್ದರು ಎಂದರೆ ನಿಜ. ನನ್ನ ತಾತ ಮತ್ತು ವಾದಿಯ ತಂದೆ ಹಾಗೂ ನನ್ನ ತಂದೆ ಮತ್ತು ನನ್ನ ಇನ್ನೊಬ್ಬ ಚಿಕ್ಕಪ್ಪ ಕೆಂಪಣ್ಣ ದಿ.28-11-1974 ರಂದು ನೊಂದಾಯಿತ ವಿಭಾಗ ಪತ್ರದ ಮೂಲಕ ಪಿತ್ರಾರ್ಜಿತ ಮತ್ತು ಸ್ವಯಾರ್ಜಿತ ಆಸ್ತಿಗಳನ್ನು ಭಾಗ ಮಾಡಿಕೊಂಡಿದ್ದರು ಎಂದರೆ ನಿಜ. ಆ ವಿಭಾಗ ಪತ್ರದಲ್ಲಿ ತೋರಿಸಿರುವ ಎ ಷಡ್ಯೂಲ್ ಸ್ವತುಗಳು ನನ್ನ ತಾತನಿಗೆ, ಬಿ ಸ್ವತ್ತುಗಳು ನನ್ನ ತಂದೆಗೆ, ಸಿ ಷಡ್ಯೂಲ್ ಸ್ವತ್ತುಗಳು ನನ್ನ ಚಿಕ್ಕಪ್ಪ ನಾರಾಯಣಸ್ವಾಮಿ ಮತ್ತು ಡಿ ಷಡ್ಡ್ಯೂಲ್ ಸ್ವತ್ತುಗಳು ನನ್ನ ಚಿಕ್ಕಪ್ಪ ಕೆಂಪಣ್ಣ ರವರ ಹಿಸ್ಸೆಗೆ ಬಂದಿದ್ದವು ಎಂದರೆ ನಿಜ.

2. ದಾವಾ ಸ್ವತ್ತು ಮೇಲೆ ಹೇಳಿದ ವಿಭಾಗ ಪತ್ರದಲ್ಲಿ ನನ್ನ ತಂದೆಯ ಭಾಗಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರದಲ್ಲಿ ನನ್ನ ತಂದೆಯ ಹಿಸ್ಸೆಗೆ ಆಸ್ತಿಗಳು ಬಾರದೆ ಇದ್ದರೂ ಸಹ ಬಂದಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ತಂದೆಯ ಹಿಸ್ಸಗೆ ಬಂದಿವೆ ಎಂದು ತೋರಿಸಲು ನಾನು ದಾಖಲೆ ಕೊಟ್ಟಿದ್ದೇನೆ. ವಿಭಾಗ ಪತ್ರ, ಮುಟೇಶನ್, ಪಹಣಿಗಳನ್ನು ಕೊಟ್ಟಿದ್ದೇನೆ. ನಾನು ದಾವಾ ಆಸ್ತಿಗಳು ನನ್ನ ತಂದೆಯ ಹಿಸ್ಸಗೆ ಬಂದಿವೆ ಎಂದು ತೋರಿಸಲು ಆ ರೀತಿ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

3. ದಾವಾ ಆಸ್ತಿಗಳು ದಿ.28-11-1974 ರಂದು ಆದದಂತಹ ವಿಭಾಗ ಪತ್ರದಲ್ಲಿ ವಾದಿಯ ತಂದೆಯ ಹಿಸ್ಸೆಗೆ ಬಂದಿದವೆ ಎಂದರೆ ಸಾಕ್ಷಿಯು ಆ ರೀತಿ ವಿಭಾಗ ಪತ್ರದಲ್ಲಿ ಅವರ ತಂದೆಯ ಹಿಸ್ಸಗೆ ಹೋದರೆ ಅವರೇ ತೆಗೆದುಕೊಳ್ಳಲಿ ಎಂದು ಹೇಳುತ್ತಾರೆ. ದಾವಾ ಸ್ವತ್ತುಗಳು ವಿಭಾಗ ಪತ್ರದಂತೆ ವಾದಿಯ ತಂದೆಯ ಹಿಸ್ಸೆಗೆ ಬಂದ ಬಳಿಕ ವಾದಿಯ ಕುಟುಂಬದವರೆ ಅದನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿಯ ತಂದೆಯು ಅವಿದ್ಯಾವಂತರಾದ ಕಾರಣ ಆತನು ತನ್ನ ಹೆಸರಿಗೆ ದಾವಾ ಸ್ವತ್ತಿನ ಖಾತೆಗಳನ್ನು ಮಾಡಿಸಿಕೊಂಡಿರಲಿಲ್ಲ ಎಂದರೆ ಸಾಕ್ಷಿಯು ಅವರಿಗೆ ವಿಭಾಗ ಪತ್ರದಲ್ಲಿ ಬಂದಂತಹ ಆಸ್ತಿಗಳ ಖಾತೆ, ಪಹಣಿ ಅವರು ಮಾಡಿಸಿಕೊಂಡಿಲ್ಲ ಎಂದು ಹೇಳುತ್ತಾರೆ. ಆ ರೀತಿ ವಾದಿಯ ತಂದೆಯೂ ತನ್ನ ಹೆಸರಿಗೆ ಕಂದಾಯ ದಾಖಲೆಗಳನ್ನು ಬದಲಾವಣೆ ಮಾಡಿಸಿಕೊಳ್ಳದೆ ಇರುವುದನ್ನು ದುರುಪಯೋಗ ಮಾಡಿಕೊಂಡು ನಾನು ನನ್ನ ಹೆಸರಿಗೆ ಎಂ.ಆರ್.13/1993-94 ರಲ್ಲಿ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಪಿತ್ರಾರ್ಜಿತವಾಗಿ ಬಂದಂತಹ ಸರ್ವೇ ನಂ.166/3 ಬಿ ಜಮೀನಿನ ಖಾತೆಯನ್ನು ನಾನು ಮಾಡಿಸಿಕೊಂಡಿದ್ದೇನೆ ಎಂದು ಸಾಕ್ಷಿಯು ಸ್ವ-ಇಚ್ಚೆಯಿಂದ ಹೇಳುತ್ತಾರೆ. ಸರ್ವೇ ನಂ.166/3 ಬಿ ವಿಭಾಗ ಪತ್ರದಲ್ಲಿ ಸೇರಿರಲಿಲ್ಲ ಎಂದರೆ ಸಾಕ್ಷಿಯೂ ನಾನು ಮತ್ತು ನನ್ನ ಸಹೋದರರು ಮಾಡಿಕೊಂಡಿರುವ ಪಂಚಾಯಿತಿ ಪಾರಿಕತ್ತಿನಲ್ಲಿ ಆ ಜಮೀನು ಇದೆ ಎಂದು ಹೇಳುತ್ತಾರೆ. ದಿ.28-11-1974 ರ ವಿಭಾಗ ಪತ್ರದಲ್ಲಿ ನನ್ನ ತಂದೆ ಹಿಸ್ಸೆಗೆ ಸರ್ವೇ ನಂ.166/3 ಬಿ ರಲ್ಲಿ ಯಾವುದೇ ಆಸ್ತಿ ಬಂದಿರಲಿಲ್ಲ ಎಂದರೆ ಸರಿಯಲ್ಲ.

4. ಸರ್ವೇ ನಂ.166/2 ಪೋಡಿಯಾಗಿ ಸರ್ವೇ ನಂ.166/3 ಬಿ ರಲ್ಲಿ 4 ಗುಂಟೆ, ಸರ್ವೇ ನಂ.166/3 ಸಿ ರಲ್ಲಿ 7 ವರೆ ಗುಂಟೆ ಆಗಿತ್ತು ಎಂದರೆ ಸರಿಯಲ್ಲ. ವಾದಿ ತಂದೆಗೆ ವಿಭಾಗ ಪತ್ರದಲ್ಲಿ ಬಂದಿರುವ ಸರ್ವೇ ನಂ.166/2 ರಲ್ಲಿನ ಜಮೀನನ್ನು ಕಬಳಿಸುವ ಉದ್ದೇಶದಿಂದ ಆ ರೀತಿ ಪೋಡಿ ನಾನು ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು 3 ಹಾಗೂ 4 ನೇ ಪ್ರತಿವಾದಿ ಕೂಡಿ ಸರ್ವೇ ನಂ.166/3 ಬಿ ರಲ್ಲಿ 4 ಗುಂಟೆ ಮತ್ತು ಸರ್ವೇ ನಂ.166/3 ಸಿ ರಲ್ಲಿ 7 ವರೆ ಗುಂಟೆಯನ್ನು ಒಟ್ಟು 11 ವರೆ ಗುಂಟೆ ಜಮೀನನ್ನು ನಮ್ಮ ಹೆಸರಿಗೆ ದಾಖಲೆಗಳನ್ನು ಸೃಷ್ಟಿ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ನನ್ನ ಹೆಂಡತಿ ಶಾರದಮ್ಮ ಅಂದರೆ 2 ನೇ ಪ್ರತಿವಾದಿಯ ಹೆಸರಿಗೆ

ವಾದಿಯರಿಗೆ ಸೇರಿದ 4 ಗುಂಟೆ ಜಮೀನನ್ನು ದಾನ ಪತ್ರ ಮಾಡಿಸಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು 2ನೇ ಪ್ರತಿವಾದಿಗೆ ದಾನ ಪತ್ರದಲ್ಲಿ ಬರೆದುಕೊಟ್ಟಂತಹ ಆಸ್ತಿ ನನಗೆ ಸ್ವಯಾರ್ಜಿತವಾಗಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ದಾನ ಪತ್ರ ಬರೆದುಕೊಟ್ಟಿರುವ ಸ್ವತ್ತು ವಾದಿಯ ತಂದೆಗೆ ವಿಭಾಗ ಪತ್ರದಂತೆ ಬಂದ ಸ್ವತ್ತು ಆಗಿದೆ ಎಂದರೆ ಸರಿಯಲ್ಲ.

5. ನಿಪಿ.5 ನಾನು ನನ್ನ ಹೆಂಡತಿ 2ನೇ ಪ್ರತಿವಾದಿಗೆ ಮಾಡಿಕೊಟ್ಟಂತಹ ದಾನ ಪತ್ರ ಎಂದರೆ ನಿಜ. ಅದರಲ್ಲಿ ನಾನು 2 ಐಟಂ ಸ್ವತ್ತುಗಳನ್ನು ನನ್ನ ಹೆಂಡತಿ ಹೆಸರಿಗೆ ದಾನ ಪತ್ರ ಬರೆದುಕೊಟ್ಟಿದ್ದೇನೆ ಎಂದರೆ ನಿಜ. ನಾನು ಸರ್ವೇ ನಂ.166/3ಬಿ ರಲ್ಲಿನ 4 ಗುಂಟೆ ಜಮೀನು ನನಗೆ ಪಿತ್ರಾರ್ಜಿತವಾಗಿ ಬಂದಂತಹ ಜಮೀನು ಮತ್ತು ಅದನ್ನು ನನ್ನ ಹೆಂಡತಿಯ ಹೆಸರಿಗೆ ದಾನ ಮಾಡುತ್ತಿದ್ದೇನೆ ಎಂದು ನಿಪಿ.5 ರಲ್ಲಿ ಹೇಳಿ ಬರೆಯಿಸಿರುತ್ತೇನೆ ಎಂದರೆ ನಿಜ. ಸದರಿ ಜಮೀನು ನನ್ನ ಹೆಸರಿನಲ್ಲಿ ಇದ್ದರೆ ತೊಂದರೆಯಾಗುತ್ತದೆ ಎಂದು ದುರುದ್ದೇಶದಿಂದ ನಾನು ನನ್ನ ಹೆಂಡತಿಯ ಹೆಸರಿಗೆ ದಾನ ಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ, ಕಾಲಾವಕಾಶ ನೀಡಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಹೊಸಕೋಟೆ.**